Rotary ರೋಟರಿ ಐಸಿರಿ ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 7

ದಿನಾಂಕ: 19.08.2025



Rtn. Anil Kumar
President



Rtn. Krishnappa
Secretary

## ಆಶಾ ಕಾರ್ಯಕರ್ತೆಯರಿಗೆ ಬೀಪಿ ಮಾನಿಟರ್ ಕೊಡುಗೆ



ಹಿರೇಬೆಟ್ಟು ಪ್ರಾಥಮಿಕ ಅರೋಗ್ಯ ಕೇಂದ್ರದ ಆಶಾಕಾರ್ಯಕರ್ತೆಯರು ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಹಾಯವಾಗುವಂತೆ ಅಲ್ಲಿಯ ಎಲ್ಲಾ ಹನ್ನೊಂದು ಮಂದಿ ಆಶಾ ಕಾರ್ಯಕರ್ತೆಯರಿಗೂ ರೋಟರಿ ಐಸಿರಿಯ ವತಿಯಿಂದ ದಾನಿಗಳ ಸಹಾಯ ಪಡೆದು ತಲಾ ಒಂದೊಂದು ಬ್ಲಡ್ ಪ್ರೆಶರ್ ತಪಾಸಣಾ ಉಪಕರಣಗಳನ್ನು (ಬಿಪಿ ಮಾನಿಟರ್) ಆಗಸ್ಟ್ 12ರ ವಾರದ ಸಭೆಯಲ್ಲಿ ನೀಡಲಾಯಿತು.

ದಾನಿ, ಸಿವಿಲ್ ಇಂಜಿನಿಯರ್ ಶ್ರೀಯುತ ವಿಕ್ರಮ್ ಕುಲಾಲ್, ವಲಯ 4ರ ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್, ವಲಯ ಸೇನಾನಿ ರೊ. ಸ್ಮಿತಾ ಕಾಮತ್ ರವರು ಈ ಉಪಕರಣಗಳನ್ನು ಉಪಸ್ಥಿತ ಆಶಾಕಾರ್ಯಕರ್ತೆಯರಿಗೆ ಹಸ್ತಾಂತರಿಸಿದರು.

ಬಳಿಕ ಮಾತನಾಡಿದ ರೊ. ಅಮಿತ್ ಅರವಿಂದ್ ರವರು, ರೋಟರಿ ಐಸಿರಿಯ ಈ ಅಮೂಲ್ಯ ಕೊಡುಗೆಯನ್ನು ಶ್ಲಾಘಿಸಿ, ರೋಟರಿ ಐಸಿರಿಯು ಇಂತಹ ಜನೋಪಯೋಗಿ ಸೇವಾಕಾರ್ಯಗಳನ್ನು ನಿರಂತರವಾಗಿ ಮಾಡುವಂತಾಗಲಿ ಎಂದು ಹಾರೈಸಿದರು.

ಸಭೆಯ ಆರಂಭದಲ್ಲಿ ರೋಟರಿ ಐಸಿರಿಯ ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರು. ಸಮುದಾಯಸೇವಾ ನಿರ್ದೇಶಕರಾದ ರೊ. ಕೆ. ಪ್ರಕಾಶ್ ಶೆಣೈಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವಲಯ ಸೇನಾನಿ ರೊ. ಸ್ಮಿತಾ ಕಾಮತ್ ಮಾತನಾಡಿ, ಈ ಕಾರ್ಯಕ್ರಮವನ್ನು ಅತ್ಯಂತ ಕಿರು ಅವಧಿಯಲ್ಲಿ ವ್ಯವಸ್ಥೆಗೊಳಿಸಿದ ರೊ. ಕೆ. ಪ್ರಕಾಶ್ ಶೆಣೈಯವರ ಕಾರ್ಯತತ್ಪರತೆಯನ್ನು ಶ್ಲಾಘಿಸಿದರು. ಇಂತಹ ಕಾರ್ಯಗಳಿಗೆ ಸ್ಥಾಪಕಾಧ್ಯಕ್ಷ ರೊ. ಕೆ. ಪ್ರಭಾಕರ ಶೆಟ್ಟಿಯವರ ನಿರಂತರ ಪ್ರೋತ್ಸಾಹವನ್ನೂ ಪ್ರಶಂಸಿಸಿದರು.

## ಸ್ವಾತಂತ್ರ್ಯ ದಿನಾಚರಣೆ



ಆಗಸ್ಟ್ 15ರಂದು ಸಣ್ಣಕ್ಕಿಬೆಟ್ಟು ಅಂಗನವಾಡಿಯಲ್ಲಿ ರೋಟರಿ ಐಸಿರಿಯ ವತಿಯಿಂದ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಜೊತೆ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಅಧ್ಯಕ್ಷ ರೊ. ಅನಿಲ್ ಕುಮಾರ್ ಧ್ವಜಾರೋಹಣ ನಡೆಸಿ ಸಣ್ಣಕ್ಕಿಬೆಟ್ಟು ಅಂಗನವಾಡಿಯ ಮಕ್ಕಳು ಪೋಷಕರು ಹಾಗೂ ಶಿಕ್ಷಕರಿಗೆ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಶುಭ ಕೋರಿದರು.

ಮಕ್ಕಳಿಗೆ ಶಾಲಾ ಬ್ಯಾಗ್ ಇಡುವ ವ್ಯವಸ್ಥೆಗಾಗಿ ಒಂದು ಸ್ಟಾಂಡ್ ಅನ್ನು ಕೊಡುಗೆಯಾಗಿ ನೀಡಿದರು.

ಅಂಗನವಾಡಿಯ ಶಿಕ್ಷಕಿ ಪ್ರಭಾವತಿ ಸ್ವಾತಂತ್ರದ ಮಹತ್ವದ ಬಗ್ಗೆ ಮಾತಾಡಿದರು. ಆಶಾಕಾರ್ಯಕರ್ತೆ ಮಂಜುಳ ವಂದನಾರ್ಪಣೆಗೈದರು. ಮಾಜಿ ನಗರಸಭಾಧ್ಯಕ್ಷೆ ಶ್ರೀಮತಿ ಸುಮಿತ್ರಾ ನಾಯಕ್, ಕೋಶಾಧಿಕಾರಿ ರೊ. ಎ. ಗಣೇಶ್ ಹಾಗೂ ರೊ. ಗೀತಾಶ್ರೀ ಎಂ. ಉಪಾಧ್ಯ ಉಪಸ್ಥಿತರಿದ್ದರು.

## ಪ್ರೇರಣಾ ಸಿರಿ: ಅಸುರೀ ಸ್ವಭಾವ – ಮಾನವೀಯ ಸ್ವಭಾವ, ಆಚಾರ – ವಿಚಾರ

- Past A. G. ರೊ. ಎಂ. **ಮಂಜುನಾಥ** ಉಪಾಧ್ಯ, ಪರ್ಕಳ



ಜಗತ್ತಿನಲ್ಲಿ ಮನುಷ್ಯ ಎರಡು ರೀತಿಯ ಗುಣಸ್ವಭಾವ ಹೊಂದಿರುತ್ತಾನೆ.

1. ಅಸುರೀ ಸ್ವಭಾವ
2. ಮಾನವೀಯ ಸ್ವಭಾವ.

ಮನುಷ್ಯ ಅಸುರೀ ಸ್ವಭಾವ ಬಿಟ್ಟು, ಮಾನವೀಯ ಸ್ವಭಾವ ರೂಢಿಸಿ ಕೊಂಡು, ಸಮಾಜಮುಖಿಯಾಗಿ ಬಾಳಬೇಕು ಎನ್ನುವುದು ಪ್ರಾಜ್ಞರ ನುಡಿ.

**ಅಸುರೀ ಸ್ವಭಾವ**: ಇವರು ಸಿಟ್ಟು, ಅಹಂಕಾರ, ದರ್ಪ ಇವುಗಳನ್ನು ಮೈಗೂಡಿಸಿಕೊಂಡು, ಆಡಂಬರ, ಕ್ರೋಧ, ಕಠೋರ ಮಾತುಗಳನ್ನಾಡುವುದು, ಅಜ್ಞಾನದಿಂದ ನಾನೇ ಮೇಲೆ ಎಂಬ ಅಹಂನಿಂದ ಎಲ್ಲರನ್ನು ಕೀಳಾಗಿ ಕಾಣುವ ಪ್ರವೃತ್ತಿ ಹೊಂದಿರುತ್ತಾರೆ.

ತಾನು ಮಾಡಿದ ಕೆಲಸ ಎಲ್ಲರೂ ಒಪ್ಪಿಕೊಳ್ಳಬೇಕು, ತಾನೆ ದೊಡ್ಡ ಮನುಷ್ಯ, ನಾನು ಹೇಳಿದಂತೆ ಎಲ್ಲರೂ ಕೇಳಬೇಕು, ನನಗೆ ಎಲ್ಲಾ ತಿಳಿದಿದೆ ಎಂಬ ದರ್ಪ, "ಅಲ್ಪ ವಿದ್ಯಾ ಮಹಾ ಗರ್ವಿ" ಎಂಬ ಮಾತು ಈ ಅಸುರೀ ಗುಣದವರಿಗೆ ಸರಿಯಾಗಿ ಹೊಂದುತ್ತದೆ.

ಪರನಿಂದನೆ, ಪರಪೀಡನೆ, ಇತರರ ಏಳಿಗೆ ಸಹಿಸದೆ ಅವರನ್ನು ದ್ವೇಷಿಸುವುದು, ಎಲ್ಲರನ್ನೂ ಕೆಟ್ಟ ದೃಷ್ಟಿಯಿಂದ ನೋಡುವುದು, ಅರಿಷ್ಟ ವೈರಿಗಳನ್ನು ಮೈತುಂಬಾ ತುಂಬಿಸಿಕೊಂಡಿರುವ ಇವರು ಸಮಾಜಕ್ಕೆ ವಿರುದ್ಧವಾಗಿ ನಡೆಯುವುದು ವಾಮ ಮಾರ್ಗದಿಂದ ತಾನು ಅಭಿವೃದ್ಧಿ ಹೊಂದುವುದು, ಕಂಡಕಂಡಲ್ಲಿ ಆಸ್ತಿ ಮಾಡಿ ಬಡವರನ್ನು ಹಿಂಸಿಸುವ ಇವರುಗಳು ತಮ್ಮ ಲಾಭಕ್ಕಾಗಿ, ತಮ್ಮ ಸುಖ ಸಂತೋಷಕ್ಕಾಗಿ ಇತರರಿಗೆ ಹಾನಿ ಮಾಡುವುದು, ಲೋಕದ ಹಿತ ಹಾಳು ಮಾಡುವ ಇವರನ್ನು ದುಷ್ಟ ಬುದ್ಧಿಯವರು ಎನ್ನಲಾಗುತ್ತದೆ.

ಇಂತಹ ಅಸುರೀ ಗುಣ ಸ್ವಭಾವದವರ ಸಂಖ್ಯೆ ಈಗ ಸಮಾಜದಲ್ಲಿ ಹೆಚ್ಚುತ್ತಿರುವುದು ಇಡೀ ಸಮಾಜಕ್ಕೆ ಬಹುದೊಡ್ಡ ಅಪಾಯಕಾರಿ ಬೆಳವಣಿಗೆ. ಇವರಿಗೆ ಸಾಕ್ಷಾತ್ ದೇವರೇ ಸರಿಯಾದ ಶಿಕ್ಷೆ ಕೊಡಬೇಕು.

**ಮಾನವೀಯ ಸ್ವಭಾವ:** ಮಾನವೀಯ ಸ್ವಭಾವ ಎಂದರೆ ಆಚಾರ ವಿಚಾರಗಳು ಶುದ್ಧವಾಗಿರುವವರು, ನುಡಿದಂತೆ ನಡೆಯುವವರು, ಬೇರೆಯವರಿಗೆ ಎಂದು ತೊಂದರೆ ಕೊಡದವರು, ಪರಹಿತ ಬಯಸುವವರು, ಗುರುಹಿರಿಯರನ್ನು ಗೌರವಿಸುವವರು ಮಾನವೀಯ ಗುಣಗಳಿಂದ ಸೌಮ್ಯ ಸ್ವಭಾವದವರಾಗಿರುತ್ತಾರೆ. ಇವರು ಲೋಕಹಿತ ಬಯಸುತ್ತಾ ಎಲ್ಲರೂ ಸುಖವಾಗಿರಲಿ ಯಾರಿಗೂ ಕಷ್ಟ, ನೋವು, ಸಂಕಷ್ಟ, ಬಾರದಿರಲಿ, ಎಲ್ಲರಿಗೂ ಒಳಿತಾಗಲಿ, ಯಾರಿಗೂ ದುಃಖ ಬಾರದಿರಲಿ, ಎಂಬ ಭಾವ ಹೊಂದಿರುತ್ತಾರೆ

ತಾವು ಮಾಡುವ ಕೆಲಸ ಶ್ರದ್ಧೆಯಿಂದ ಮಾಡುತ್ತಾ, ಕೊಟ್ಟ ಮಾತಿಗೆ ತಪ್ಪದಿರುವುದು, ಸರ್ವರ ಹೃದಯದಲ್ಲೂ ದೇವರು ನೆಲೆಸಿದ್ದಾನೆ ಎಂದು ತಿಳಿದು ಕಾಯಾ, ವಾಚಾ, ಮನಸಾ ಯಾರಿಗೂ ನೋವುಂಟು ಮಾಡದಿರುವುದು, ಕರ್ತವ್ಯವೇ ದೇವರೆಂದು ಕೆಲಸ ಮಾಡುವವನು.

ಭಗವಂತನ ಮೇಲೆ ಭಕ್ತಿ ಇಟ್ಟು, ಆತ ನಡೆಸಿದಂತೆ ನಡೆಯುವೆ ಎಂಬ ಭಾವ ಇರುವದು, ಇಲ್ಲಿ ನನ್ನದು ಎಂಬುದು ಏನೂ ಇಲ್ಲ ಎಲ್ಲವೂ ಭಗವಂತನ ಇಚ್ಛೆ ಎಂಬ ಚಿಂತನೆ ಹೊಂದಿರುವುದು.

ಜಪ, ತಪ, ಪೂಜೆ, ಭಜನೆ, ಅನುಷ್ಠಾನ ಹೊಂದಿ, ದೇವರ ಧ್ಯಾನದಲ್ಲಿ ಇರುವುದು. ಇಂತಹವರು ಯಾವತ್ತೂ ಯಾರಿಗೂ ಕೇಡನ್ನು ಬಯಸದಿರುವವರಾಗಿರುತ್ತಾರೆ. ನ್ಯಾಯ, ನೀತಿ, ಧರ್ಮ ಎಂದು ಬಿಡುವುದಿಲ್ಲ. ಇಂತಹ ಮಾನವೀಯ ಗುಣಗಳನ್ನು ರೂಢಿಸಿಕೊಂಡ ಮನುಷ್ಯರು ಭಗವಂತನ ಕೃಪೆಗೆ ಭಾಜನ ರಾಗುತ್ತಾರೆ.

ಚಿಕ್ಕವಯಸ್ಸಿನಲ್ಲಿ ಸರಿಯಾದ ಮಾರ್ಗದರ್ಶನ ಹಿರಿಯರಿಂದ ಪಡೆದು ನಡೆದರೆ, ಅಸುರೀ ಸ್ವಭಾವ ಮರೆಯಾಗಿ ಮಾನವೀಯ ಸ್ವಭಾವ ಮೂಡಿಸಿಕೊಂಡು, ಇಹದಲ್ಲೂ ಪರದಲ್ಲೂ ಸುಖದಿಂದಿರೋಣ.

**ಸರ್ವೇ ಸಜ್ಜನ ಸುಖಿನೋ ಭವಂತು.**

---




ರೊ. ಎಂ. ಮಂಜುನಾಥ ಉಪಾಧ್ಯ

ಬೀಪಿ ಮಾನಿಟರ್ ಕೊಡುಗೆಯನ್ನು ಎಷ್ಟು appreciate ಮಾಡಿದರೂ ಸಾಲದು….. ಹೃದಯ ಶ್ರೀಮಂತಿಕೆಯ ಕಾರ್ಯಕ್ರಮವಿದು.

ಅಂತಾರಾಷ್ಟ್ರೀಯ ಸಂಸ್ಥೆಯಾಗಿ ರೋಟರಿ ಸ್ಥಳೀಯ ಆದ್ಯತೆಗಳಿಗೆ ಸ್ಪಂದಿಸುವುದು ಅಭಿನಂದನೀಯ…




ರೊ. ಸುಕೇಶ್ ಕುಂದರ್

## ಬೌದ್ಧಿಕ ಸಿರಿ

ಒಂದು ದಿನ ಒಬ್ಬ ಪುಟ್ಟ ಹುಡುಗ ಒಂದು ಚಿಟ್ಟೆಯ ಕೋಶವನ್ನು ಮನೆಗೆ ತಂದನು. ಪ್ರತಿದಿನ ಅದನ್ನು ಪರೀಕ್ಷಿಸಿ, ಆಹಾರಕ್ಕಾಗಿ ಸಾಕಷ್ಟು ಎಲೆಗಳಿವೆಯೇ ಎಂದು ಖಚಿತಪಡಿಸಿಕೊಳ್ಳುತ್ತಿದ್ದನು.

ಕ್ರಮೇಣ ಕೋಶ ರೂಪಾಂತರಕ್ಕೆ ಸಿದ್ಧವಾಗಿ ಚಲನೆ ಆರಂಭವಾದುದನ್ನು ಗಮನಿಸಿದನು. ಕೋಶದಲ್ಲಿ ಸಣ್ಣ ರಂಧ್ರವಾಗಿ, ಚಿಟ್ಟೆ ತನ್ನ ಗೂಡಿನಿಂದ ಹೊರಬರಲು ಕಷ್ಟಪಡುತ್ತಿರುವುದನ್ನು ನೋಡಿದನು.

ಹೀಗೇ ಬಹಳ ಹೊತ್ತು ಚಿಟ್ಟೆ ಕಷ್ಟಪಡುತ್ತಿರುವುದನ್ನು ನೋಡಿ, ಅದಕ್ಕೆ ಸಹಾಯ ಮಾಡಲು ಸಿದ್ಧನಾದನು.

ಕೋಶದ ರಂಧ್ರವನ್ನು ದೊಡ್ಡದಾಗಿಸಲು, ಒಂದು ಕತ್ತರಿಯನ್ನು ತಂದು ಕೋಶವನ್ನು ಕತ್ತರಿಸಿದನು. ಚಿಟ್ಟೆ ಹೊರಹೊಮ್ಮಿತು!

ಆದರೆ ಚಿಟ್ಟೆಯ ದೇಹವು ತುಂಬಾ ಊದಿಕೊಂಡಿತ್ತು ಮತ್ತು ರೆಕ್ಕೆಗಳು ಚಿಕ್ಕದಾಗಿದ್ದು ಸುಕ್ಕುಗಟ್ಟಿದ್ದವು. ಸುಂದರ ರೆಕ್ಕೆಗಳಿಲ್ಲ...

ಚಿಟ್ಟೆ ಎಂದಿಗೂ ಹಾರಲು ಸಾಧ್ಯವಾಗಲಿಲ್ಲ. ಅದು ತನ್ನ ಜೀವನದ ಉಳಿದ ಭಾಗವನ್ನು ಸುಕ್ಕುಗಟ್ಟಿದ ರೆಕ್ಕೆಗಳೊಂದಿಗೆ ತೆವಳುತ್ತಾ ಕಳೆಯಿತು.

ಚಿಟ್ಟೆಯು ತನ್ನ ಕೋಶದಿಂದ ಬರಲು ಮಾಡುವ ಹೋರಾಟವೇ ಅದರ ಹೊಟ್ಟೆಯಿಂದ ದ್ರವವನ್ನು ಹೊರಗೆ ತಳ್ಳಿ ಅದು ಬಲಗೊಳ್ಳಲು ಮತ್ತು ಅದರ ರೆಕ್ಕೆಗಳನ್ನು ರಕ್ತದಿಂದ ತುಂಬಲು ನೈಸರ್ಗಿಕವಾಗಿ ಸಾಧ್ಯವಾಗುತ್ತದೆ.

ಆ ಹುಡುಗ ಚಿಟ್ಟೆಗೆ ಸಹಾಯ ಮಾಡುವ ಉತ್ಸಾಹದಲ್ಲಿ ಅದರ ಈ ಬೆಳವಣಿಗೆಯನ್ನು ಕುಂಠಿತಗೊಳಿಸಿದನು. ಎಂಥಾ ಶಾರ್ಟ್ ಕಟ್ !

ನಿಮ್ಮ ನಾಳೆಯ ಬೆಳವಣಿಗೆಗೆ ಬೇಕಾದ ಶಕ್ತಿಯನ್ನು ಗಳಿಸಿಕೊಡುವುದೇ ನಿಮ್ಮ ಇಂದಿನ ಶ್ರಮ !

ಇಂದಿನ ಬದುಕು ಹೋರಾಟಮಯ ಎಂದೆನಿಸಬೇಡಿ. ಆ ಹೋರಾಟವೇ ನಾಳೆಯ ಸುಂದರ ಬದುಕಿಗೆ ಬೇಕಾದ ಶಕ್ತಿ ಮತ್ತು ಚೈತನ್ಯ ನೀಡಬಲ್ಲುದು!

**ಶಾರ್ಟ್ ಕಟ್ ಒಳ್ಳೆಯದೆಂದೇನಿಲ್ಲ!**

## ಬೀಪಿ ಮಾನಿಟರ್ ಸ್ವೀಕರಿಸಿದವರ ಅಭಿಪ್ರಾಯ ....








ಹಿರೇಬೆಟ್ಟು ಪ್ರಾಥಮಿಕ ಅರೋಗ್ಯ ಕೇಂದ್ರದ ಶುಶ್ರೂಷಕಿ ಶ್ರೀಮತಿ ಹರಿಣಾಕ್ಷಿಯವರು ಮಾತನಾಡಿ, ಅರೋಗ್ಯ ತಪಾಸಣೆಯಲ್ಲಿ ರಕ್ತದೊತ್ತಡ ದಾಖಲಿಸುವ ಮತ್ತು ಸೂಕ್ತ ಚಿಕಿತ್ಸೆ ನೀಡುವಲ್ಲಿ ಶುಶ್ರೂಷಕರಿಗೆ ರಕ್ತದೊತ್ತಡವನ್ನು ತಿಳಿಯಬೇಕಾದುದು ಅತೀ ಅವಶ್ಯಕ. ಈ ಮೊದಲು ಪರಿಸರದ ಗರ್ಭಿಣಿಯರು, ವಯಸ್ಸಾದ ಹಿರಿಯ ನಾಗರಿಕರು ಬೀಪಿ ತಪಾಸಣೆಗೆ ಅರೋಗ್ಯ ಕೇಂದ್ರದ ಕಡೆಗೆ ಅಥವಾ ವೈದ್ಯರಲ್ಲಿಗೇ ಹೋಗಬೇಕಿತ್ತು. ಆದರೆ, ಇನ್ನು ಮುಂದೆ ಆಶಾಕಾರ್ಯಕರ್ತೆಯರು ಇಂತಹವರ ಮನೆಗೆ ನಿಯತವಾಗಿ ಭೇಟಿ ನೀಡುವಾಗಲೇ ರಕ್ತದೊತ್ತಡವನ್ನೂ ನೋಡಿ, ಅದಕ್ಕೆ ತಕ್ಕಂತೆ ಆರೈಕೆ ಮಾಡಲು ಸಾಧ್ಯವಾಗುತ್ತದೆ. ಇದನ್ನು ಸಾಧ್ಯವಾಗಿಸಿದ ರೋಟರಿ ಐಸಿರಿ ಮತ್ತು ಶ್ರೀ ವಿಕ್ರಮ್ ಕುಲಾಲ್ ರಿಗೆ ಧನ್ಯವಾದ ತಿಳಿಸಿದರು.

ಬೀಪಿ ಮಾನಿಟರ್ ಸ್ವೀಕರಿಸಿದ ಆಶಾಕಾರ್ಯಕರ್ತೆಯರ ಪರವಾಗಿ ಶ್ರೀಮತಿ ನಳಿನಿಯವರು ರೋಟರಿ ಐಸಿರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿ, ಈ ಬೀಪಿ ಮಾನಿಟರ್ ಗಳಿಂದ ಪರಿಸರದ ಜನರಿಗೆ ಆಗುವ ಅನುಕೂಲತೆಯ ಬಗ್ಗೆ ಸಂತಸ ವ್ಯಕ್ತಪಡಿಸಿದರು. ನಡೆದುಕೊಂಡು ಆರೋಗ್ಯ ಕೇಂದ್ರಕ್ಕೆ ಬರಲು ಸಾಧ್ಯವಾಗದ, ಸರಿಯಾಗಿ ವಾಹನ ಸಂಪರ್ಕ ಇಲ್ಲದ ಮನೆಗಳಲ್ಲಿ ಆರೈಕೆ ಬೇಕಾದವರಿಗೆ ಈ ಕೊಡುಗೆ ಬಹಳ ಉಪಕಾರಿಯಾಗಿದೆ ಎಂದರು.

## ಪ್ರತಿಭಾ ಸಿರಿ: ರೊ. ಗುರುಪ್ರಸಾದ್ ಕಾಮತ್ ವಿದೇಶ ಪ್ರಯಾಣ



ಟಾಟಾ ಎಐಎ ಲೈಫ್ ಇನ್ಸೂರೆನ್ಸ್ ಕಂಪೆನಿಯಲ್ಲಿ ಎಂ.ಡಿ.ಆರ್.ಟಿ. ಸಾಧನೆಗೈದ ನಮ್ಮ ಸ್ಥಾಪಕ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ರವರು ವಿಯೆಟ್ನಾಮ್ ದೇಶದ ದ ನಾಂಗ್ ನಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಮಟ್ಟದ ಎಂ.ಡಿ.ಆರ್.ಟಿ. ಕಾನ್ ಕ್ಲೇವ್ ನಲ್ಲಿ ಭಾಗವಹಿಸಲು ಇಂದು ಪರ್ಕಳದಿಂದ ತೆರಳಿದರು. ಮಂಗಳೂರಿನಿಂದ ಬೆಂಗಳೂರು – ಕೌಲಾಲಂಪುರ ಮೂಲಕ ನಾಳೆ ಅಪರಾಹ್ನ ವಿಯೆಟ್ನಾಮ್ ತಲುಪಲಿದ್ದು, ಸಂಪೂರ್ಣ ಪ್ರಯಾಣವನ್ನು ಕಂಪೆನಿಯೇ ಪ್ರಾಯೋಜಿಸಿರುತ್ತದೆ.

ರೊ. ಗುರುಪ್ರಸಾದ್ ಕಾಮತ್ ರವರು 2024ನೇ ಸಾಲಿನ ಉಡುಪಿ ಶಾಖೆಯ ಪ್ರಪ್ರಥಮ ಎಂ.ಡಿ.ಆರ್.ಟಿ ಅಚೀವರ್ ಆಗಿರುತ್ತಾರೆ. ಬಳಿಕ ಆ ಸಾಲಿನಲ್ಲಿ ಒಟ್ಟು ಏಳು ಜನರು ಈ ಸಾಧನೆಗೈದಿದ್ದಾರೆ. **ರೊ. ಗುರುಪ್ರಸಾದ್ ಕಾಮತ್ ರವರಿಗೆ ಶುಭ ಹಾರೈಕೆಗಳು.**



## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 6ನೇ ವಾರದ ಸಭೆಯು 12/08/2025ರಂದು RCC ಕಾರ್ಯಾಲಯದಲ್ಲಿ ನಡೆಯಿತು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಕೊರಳ ಲಾಂಛನ ತೊಡಿಸಿ, ಅಧ್ಯಕ್ಷ ರೊ. ಅನಿಲ್ ಕುಮಾರ್ ಸಭೆಯನ್ನು ಆರಂಭಿಸಿದರು. ರೊ. ಡಾ. ಎ. ಗಣೇಶ್ ರವರ ಪ್ರಾರ್ಥನೆಯ ಬಳಿಕ ಅಧ್ಯಕ್ಷರು ಎಲ್ಲರನ್ನೂ ಸ್ವಾಗತಿಸಿದರು. ಅತಿಥಿಗಳ ಉಪಸ್ಥಿತಿಯನ್ನು ಅಧ್ಯಕ್ಷರು ಗೌರವಪೂರ್ಣವಾಗಿ ಗುರುತಿಸಿದರು. ಜೊತೆ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಕಳೆದ ವಾರದ ವರದಿಯನ್ನು ಮಂಡಿಸಿದರು.

ಸಮುದಾಯಸೇವಾ ನಿರ್ದೇಶಕರಾದ ರೊ. ಪ್ರಕಾಶ್ ಶೆಣೈಯವರು ಆಶಾಕಾರ್ಯಕರ್ತೆಯರಿಗೆ ರಕ್ತದೊತ್ತಡ ಪರೀಕ್ಷಾ ಉಪಕರಣದ ಕೊಡುಗೆ ನೀಡುವ ಈ ವಿಶೇಷ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ವಲಯ 4ರ ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಹಾಗೂ ಮುಖ್ಯ ಅತಿಥಿ ಮತ್ತು ದಾನಿ ಶ್ರೀಯುತ ವಿಕ್ರಮ್ ಕುಲಾಲ್ ರವರು ಹನ್ನೊಂದು ಜನ ಆಶಾ ಕಾರ್ಯಕರ್ತೆಯರಿಗೆ ರಕ್ತದೊತ್ತಡ ಪರೀಕ್ಷಾ ಉಪಕರಣವನ್ನು ಕೊಡುಗೆಯಾಗಿ ನೀಡಿದರು.

ಆಶಾ ಕಾರ್ಯಕರ್ತೆಯರ ಪರವಾಗಿ ಶ್ರೀಮತಿ ನಳಿನಿಯವರು ಈ ಕೊಡುಗೆಯ ಉಪಯುಕ್ತತೆಯನ್ನು ವಿವರವಾಗಿ ತಿಳಿಸಿ ಕೃತಜ್ಞತೆ ಸಲ್ಲಿಸಿದರು. ರೋಟರಿ ಐಸಿರಿ ಸದಾ ಆಶಾ ಕಾರ್ಯಕರ್ತೆಯರಿಗೆ ಸಹಾಯ ನೀಡುತ್ತಾ ಬಂದಿದೆ ಎಂದು ಮೆಚ್ಚುಗೆಯ ಮಾತನ್ನಾಡಿದರು. ಹಿರೇಬೆಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರದ ಶುಶ್ರೂಷಕಿ ಶ್ರೀಮತಿ ಹರಿಣಾಕ್ಷಿಯವರು BP ಮಾಪನದಂತ ಉಪಯುಕ್ತ ಕೊಡುಗೆ ನೀಡಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು.

ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಅವರು ದಾನಿ ವಿಕ್ರಮ್ ಕುಲಾಲ್ ಅವರನ್ನು ಪ್ರಶಂಸಿಸಿದರು. ಐಸಿರಿಯಿಂದ ಇನ್ನೂ ಹೆಚ್ಚು ಸಾಮಾಜಿಕ ಕಾರ್ಯಕ್ರಮಗಳು ನಡೆಯಲಿ ಎಂದು ಆಶಿಸಿದರು. ಜಿಲ್ಲಾ ಯೋಜನೆಯಾದ ಆರೋಗ್ಯ ಕ್ಷೇತ್ರದಲ್ಲಿ ಸೇವೆಗಿರುವ ಅವಕಾಶಗಳನ್ನು ತಿಳಿಸಿದರು. ಐಶ್ವರ್ಯ ಆರನೇ ವಾರದ ಸಂಚಿಕೆಯನ್ನು ಅತಿಥಿಗಳಾದ ಶ್ರೀ ವಿಕ್ರಂ ಕುಲಾಲ್ ಬಿಡುಗಡೆ ಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಸಹಕರಿಸಿದರು. ಅತಿಥಿಗಳನ್ನು ಸ್ಮರಣಿಕೆ ನೀಡಿ ಬೀಳ್ಕೊಡಲಾಯಿತು.

ಸಭೆ ಮುಂದುವರೆಯುತ್ತಾ ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಇಂಟರಾಕ್ಟ ಅಸೆಂಬ್ಲಿಗೆ ಸ್ಥಳ ನಿಗದಿಪಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಂಡರು. ಹಾಗೆಯೇ ಆಶಾ ಕಾರ್ಯಕರ್ತೆಯರಿಗೆ BP ಮಾಪನ ಕೊಡುಗೆ ನೀಡಿದ್ದರ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಸದಸ್ಯರಿಗೆ ಅವಕಾಶದಲ್ಲಿ ವಲಯ ಸೇನಾನಿ ರೊ. ಸ್ಮಿತಾ ಕಾಮತ್ ರವರು ಸಮುದಾಯಸೇವಾ ಕ್ಷೇತ್ರದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವ ನಿರ್ದೇಶಕ ರೊ. ಪ್ರಕಾಶ್ ಶೆಣೈ ಅವರು ಹಾಗೂ ತಮ್ಮ ಸಾಮಾಜಿಕ ಸೇವೆಗಳಲ್ಲಿ ಐಸಿರಿಗೆ ಪಾತ್ರ ನೀಡುತ್ತಿರುವ ರೊ. ಪ್ರಭಾಕರ್ ಶೆಟ್ಟಿ ಇವರನ್ನು ಪ್ರಶಂಸಿಸಿದರು. ವಲಯ ಮತ್ತು ಜಿಲ್ಲೆಯ membership seminar ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ ನೀಡಿದರು.

ರೊ. ಪ್ರಕಾಶ್ ಶೆಣೈ ಅವರು ಆಗಸ್ಟ್ 15ರಂದು ಶೆಟ್ಟಿಬೆಟ್ಟು ಶಾಲೆಯಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮಕ್ಕೆ ಎಲ್ಲರನ್ನೂ ಆಹ್ವಾನಿಸಿದರು. ರೊ. ಮಂಜುನಾಥ್ ಉಪಾಧ್ಯ ಅವರು ರೊ. ಪ್ರಕಾಶ್ ಶೆಣೈಯವರ ಕಾರ್ಯವೈಖರಿಯನ್ನು ಪ್ರಶಂಸಿಸಿದರು. ರೊ. ಸುಕೇಶ್ ಮೂಲ ಸೌಕರ್ಯದ ಅಗತ್ಯ ಇರುವವರಿಗೆ ಸಹಾಯ ಮಾಡೋಣ ಎಂದು ಕರೆ ನೀಡಿದರು. ರೊ. ರಾಜೇಶ್ ಡಿ. ಶೆಣೈಯವರು ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ರೊ. ಗುರುಪ್ರಸಾದ್ ಕಾಮತ್ ರವರು ಇಂಟರಾಕ್ಟ ಅಸೆಂಬ್ಲಿಯ ಸ್ಥಳ ನಿಗದಿಯ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದರು ಹಾಗೂ ರೊ. ಪ್ರಕಾಶ್ ಶೆಣೈ ಅವರ ಸಾಮಾಜಿಕ ಕಳಕಳಿಯನ್ನು ಪ್ರಶಂಸಿಸಿದರು.

ಅಧ್ಯಕ್ಷರ ಮಾತಿನಲ್ಲಿ ರೊ. ಅನಿಲ್ ರವರು ಎಲ್ಲರ ನಿರಂತರ ಸಹಕಾರಕ್ಕೆ ವಂದಿಸಿದರು. ಜೊತೆ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ವಂದಿಸಿದರು. ದಂಡಪಾಣಿ ಕೊರಳ ಲಾಂಛನ ತೆಗೆದು, ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 6ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ ಆರನೇ ಆವೃತ್ತಿಯನ್ನು ಸಿವಿಲ್ ಇಂಜಿನಿಯರ್ ಶ್ರೀಯುತ ವಿಕ್ರಮ್ ಕುಲಾಲ್ ರವರು 12/08/2025ರಂದು ಬಿಡುಗಡೆ ಗೊಳಿಸಿದರು. ವಲಯ 4ರ ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್, ವಲಯ ಸೇನಾನಿ ರೊ. ಸ್ಮಿತಾ ಕಾಮತ್, ಜಿಲ್ಲಾ ಆರ್.ಸಿ.ಸಿ ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್, ಅಧ್ಯಕ್ಷ ರೊ. ಅನಿಲ್ ಕುಮಾರ್, ಸಮುದಾಯಸೇವಾ ನಿರ್ದೇಶಕ ರೊ. ಪ್ರಕಾಶ್ ಶೆಣೈ ಉಪಸ್ಥಿತರಿದ್ದರು.




ರೋಟರಿ ಐಸಿರಿಯ ಆರನೇ ವಾರದ ಸಭೆಯಲ್ಲಿ ಈ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ರೊ. ಕೊರಗಪ್ಪ ಶೆಟ್ಟಿಗಾರ್ ನಡೆಸಿದರು. ರೊ. ಡಾ. ಎ. ಗಣೇಶ್ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.




ಆಗಸ್ಟ್ 12ರಂದು ನಡೆದ ಆಶಾಕಾರ್ಯಕರ್ತೆಯರಿಗೆ ರಕ್ತದೊತ್ತಡ ಪರೀಕ್ಷಾ ಉಪಕರಣದ ಕೊಡುಗೆ ನೀಡುವ ಕಾರ್ಯಕ್ರಮದ ರೂವಾರಿ ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈಯವರನ್ನು ಅಧ್ಯಕ್ಷ ರೊ. ಅನಿಲ್ ಕುಮಾರ್ ರವರು ವೇದಿಕೆಗೆ ಕರೆದು ಸ್ಮರಣಿಕೆ ನೀಡಿ ಗುರುತಿಸಿದ ಕ್ಷಣ.